prove that person behaves always in the right direction. This boy has been involved in cettain acts of mistconduct, and damage of property and this and that. I agree with you that the Probationary S.I's conduct cannot be justified. The Commissioner has given him a warning and also asked him to see that such conduct is not repeated.

ಶ್ರೀ ಎಂ. ಚಂದ್ರಶೇಖರ್.—ಆ ಹುಡುಗ ಇಂಜಿನಿಯರಿಂಗ್ ಗ್ರಾಜ್ಯುಯೇಟ್ ಪೋಲೀಸ್ ಸ್ಟೇಷನ್ ಮುಂದೆಯೇ ಒಂದು ಪ್ರೆಸ್ ಇಟ್ಟುಕೊಂಡು, ಪ್ರೆಸ್ ರನ್ ಮಾಡುತ್ತಿದ್ದಾನೆ. ಇದುವರೆಗೂ ಈ ಹುಡುಗ ಇಂಥ ಸಮಾಜಘಾತುಕ ಕಾರ್ಯಗಳಲ್ಲಿಯೂ ಎಂದೂ ಕೈ ಹಾಕಿಲ್ಲ. ದಯವಿಟ್ಟು ತಾವು ಇದರ ಬಗ್ಗೆ ಸರಿಯಾದ ಎನ್‌ಕ್ವೈರಿ ಮಾಡಿಸಿ ಇಲ್ಲದ ಆರೋಪಗಳನ್ನು ಇಂಥವರ ಮೇಲೆ ಹೊರಿಸುವುದು ಸರಿಯಲ್ಲ. ಪೋಲೀಸರು ಕೊಟ್ಟಿರುವ ವರದಿ ಸತ್ಯಕ್ಕೆ ದೂರವಾದುದು. ಪೋಲೀಸ್ ಸ್ಟೇಷನ್‌ನ ಎದುರುಗಡೆ ಈತ ಇರುವುದರಿಂದ ಈತನ ಆಕ್ಟಿವಿಟೀಸ್‌ನ್ನು ೨೪ ಗಂಟೆಯೂ ನೋಡುತ್ತಿರುತಾರೆ. ಇಂಥ ದೋಷರೋಪಣೆಗಳನ್ನು ಆ ಹುಡುಗನ ಮೇಲೆ ಹಾಕುವುದು ಸರಿಯಲ್ಲ.

ಶ್ರೀ ಡಿ. ದೇವರಾಜ ಅರಸ್.—ನನ್ನ ಮುಂದೆ ಇರತಕ್ಕ ವರದಿಯ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ನಿಮಗೆ ಗೊತ್ತಾದ್ದು ಎಲ್ಲಾ ಸರಿ ಎಂದು ಹೇಳಿಕೊಂಡು ತಿಳಿದುಕೊಳ್ಳುವುದು ತಪ್ಪಾಗುತ್ತದೆ. ಇಂಥ ವಯಲನ್ಸ್‌ಗಳಲ್ಲಿ ಪ್ರಾಪರ್ಟಿ ನಷ್ಟವಾಯಿತು, ಅದನ್ನು ಕಂಡುಹಿಡಿಯಬೇಕು ಎಂದು ಒಂದು ಕಡೆ ಹೇಳುತ್ತೀರಿ, ಇನ್ನೊಂದು ಕಡೆ ತಪ್ಪು ವರದಿ ಓದುತ್ತಾರೆಂದು ಹೇಳುತ್ತೀರಿ. ಕೆಲವರು ನೋಡುವುದಕ್ಕೆ ಚೆನ್ನಾಗಿದ್ದರೂ ಕೂಡ ಒಂದೊಂದು ಸಂದರ್ಭದಲ್ಲಿ ಹೀಗೆ ಮಾಡುವುದು ಉಂಟು. ಇಂಥ ಸಮಯದಲ್ಲಿ ಪೋಲೀಸರು ಅವರ ಕರ್ತವ್ಯ ಮಾಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಮತ್ತು ತಾವು ಹೇಳುವುದನ್ನು ಎಲ್ಲಾ ಸರಿ ಎಂದು ಹೇಳುವುದಕ್ಕೂ ಆಗುವುದಿಲ್ಲ. ಇಲ್ಲಿ ಪ್ರೊಬೇಷನರಿ ಸಬ್‌ಇನ್ಸ್‌ಪೆಕ್ಟರ್ ಅವರ ಬಿಹೇವಿಯರ್ ಸರಿಯಾಗಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಇವರನ್ನು ಅವರು ಕೇಳುವುದಕ್ಕೆ ಏಕೆ ಹೋಗಿದ್ದರು ಇವರು ಗೌರವಾನ್ವಿತ ವ್ಯಕ್ತಿಗಳು ಎಂದರೆ, ಅದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ನಾನು ಚೇರೆಯವರ ವಿಚಾರದಲ್ಲಿ ಹೇಳುತ್ತಿರಲಿಲ್ಲ. ಇವರ ವಿಚಾರದಲ್ಲಿ ಮಾತ್ರ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಕಾನೂನಿನ ಮುಂದೆ ಯಾರಾದರೇನು.

ಶ್ರೀ ಡಿ ದೇವರಾಜ ಅರಸ್.—ನಾವು ಸುಳ್ಳು-ಗಿಳ್ಳು ಹೇಳುವುದಕ್ಕಾಗುವುದಿಲ್ಲ.

Rates of complex fertilisers prevailing in the State.

854. Sri K. H. Hanume Gowda (Hassan).—Will the Minister for Agriculture and Parliamentary Affairs be pleased to state :—

(*a*) the rates at which the 17 : 17 : 17, 15 : 15 : 15, 14 : 28 : 14 and other complex manures manufactured in the same company are being sold in the Facts Company, State Marketing Federation and Agro Industries Corporation (details of retail and wholesale rates may be furnished) :

(*b*) the reasons for the difference in the said rates ?

SRI K. H. RANGANATH (Minister for Agriculture and Parliamentary Affairs).—

(*a*) Fact—

Details of Manures	Whole sale price of a tonne in Rs.	Retail price of a tonne in Rs.	Marketing Federation		Agro Industries Corporation	
			Whole sale price of a tonne in Rs.	Retail Price of a tonne in Rs.	Whole sale price of a tonne in Rs.	Retail Price of a tonne in Rs.
1. 17 : 17 : 17	1761-30	1864-30	1768-00	...	1768-00	1854-00
2. 15 : 15 ; 15	...	...	1506-00 (Imported)	...	1506-00 (Imported)	1562-00
			1490-00 (Suphala)	...	1490-00 (Suphala)	1562-00
3. 14 : 28 : 14	...	...	1906-00	...	1906-00	2003-76

(*b*) After going through the above details it could be seen that there is no differences in the selling prices in the said Institutions.

ಶ್ರೀ ಕೆ. ಎಚ್. ಹನುಮೇಗೌಡ.—ಫ್ಯಾಕ್ಟ್ ಕಂಪನಿಯವರು, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು, ಮತ್ತು ಮಾರ್ಕೆಟಿಂಗ್ ಫೆಡರೇಷನ್‌ನವರು ಮಾರಾಟ ಮಾಡತಕ್ಕ ಗೊಬ್ಬರಗಳ ರೇಟು ಗಳಲ್ಲಿ ವ್ಯತ್ಯಾಸವಿದೆಯೇ ಎನ್ನುವ ಸನ್ನ ಪ್ರಶ್ನೆಗೆ ಇಲ್ಲ ಎಂದು ಉತ್ತರ ಹೇಳಿದ್ದೀರಿ. ಮಾರ್ಕೆಟಿಂಗ್ ಫೆಡರೇಷನ್‌ನವರು ರೇಟುಗಳನ್ನು ಪ್ರಿಂಟ್ ಮಾಡಿ ಹಂಚಿರುವ ಲೆಟರ್‌ನ್ನು ತಮ್ಮಲ್ಲಿಗೆ ಕಳುಹಿಸಿಕೊಡು ತ್ತೇನೆ. ತಾವು ಹಾಸನಕ್ಕೆ ಕಾನ್‌ಫರೆನ್ಸ್‌ಗೆ ಬಂದಿದ್ದಾಗಲೂ ಈ ವಿಚಾರವನ್ನು ತಮ್ಮಲ್ಲಿ ಪ್ರಸ್ತಾಪ ಮಾಡಿದ್ದೆನು. ಒಂದು ಟನ್‌ಗೆ ೧೦-೨೦ ರೂಪಾಯಿಗಳ ವ್ಯತ್ಯಾಸ ಫ್ಯಾಕ್ಟ್ ಕಂಪನಿಗೂ ಮತ್ತು ಮಾರ್ಕೆ ಟಿಂಗ್ ಫೆಡರೇಷನ್‌ಗೂ ಇರುತ್ತದೆ. ೧೦ನೇ ಮಾರ್ಚಿ ೧೯೭೯ರಿಂದ ಈಚೆಗೆ ಇಷ್ಟು ವ್ಯತ್ಯಾಸವಿದೆ. ಮೊದಲು ಇನ್ನೂ ಜಾಸ್ತಿ ವ್ಯತ್ಯಾಸ ಇತ್ತು. ತಾವು ಇದರ ಬಗ್ಗೆ ನಿಜಾಂಶವನ್ನು ತಿಳಿಸಿಲ್ಲ. ಸತ್ಯಕ್ಕೆ ದೂರವಾದ ಸಂಗತಿಯನ್ನು ಇಲ್ಲಿ ಕೊಟ್ಟಿದ್ದೀರಿ. ಆದ್ದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಬೇಕಾಗಿ ಪ್ರಾರ್ಥಿಸುತ್ತಾ ಸರಿಯಾದ ಮಾಹಿತಿಯನ್ನು ಮಾನ್ಯ ಸಚಿವರು ನಂತರ ಒದಗಿಸಲಿ ಎಂದು ಕೇಳಿಕೊಳ್ಳು ತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ ಇಲ್ಲಿ ಕೆಂಟ್ಪಿರತಕ್ಕ ಉತ್ತರ ಮಾರ್ಚ್ ೭ರ ಹಿಂದೆ ಯಾವ ಪರಿಸ್ಥಿತಿ ಇತ್ತೋ ಅದಕ್ಕೆ ಸಂಬಂಧಪಟ್ಟಿದೆ. ನಂತರ ರೇಟು ರಿವೈಸ್ ಆಗಿದೆ. ಮಾನ್ಯ ಸದಸ್ಯರು ಇದನ್ನು ಕೂಲಂಕುಷವಾಗಿ ವಿಚಾರ ಮಾಡಿ, ಉತ್ತರ ಕೊಡಿ ಎಂದು ಹೇಳುತ್ತಿದ್ದಾರೆ. ತಾವು ಅಪ್ಪಣೆ ಕೊಟ್ಟರೆ, ಇದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ನಮ್ಮ ಸರ್ಕಾರವೂ ಕೂಡ. ಕೇಂದ್ರ ಸರ್ಕಾರದವರು ಏನು ಗೊಬ್ಬರದ ಬೆಲೆಯನ್ನು ನಿಗಧಿ ಮಾಡುತ್ತಾರೆಯೋ ಅದರಂತೆ ಮಾರಾಟ ಮಾಡಬೇಕಾಗುತ್ತದೆ. ಇದರ ಮೇಲೆ ನಾವು ಹೆಚ್ಚಿನ ಮಾರ್ಜಿನನ್ನು ತೆಗೆದುಕೊಳ್ಳಬೇಕಾಗಿಲ್ಲ. ಮಾನ್ಯ ಸದಸ್ಯರು ಹೇಳುವ ರೀತಿ ಯಲ್ಲಿ ಮಾರ್ಕೆಟಿಂಗ್ ಫೆಡರೇಷನ್‌ನವರು ರೇಟುಗಳನ್ನು ಪ್ರಿಂಟ್ ಮಾಡಿ ಹಂಚಿ ಕಾನೂನಿಗೆ ವಿರುದ್ಧವಾಗಿ ಮಾರಾಟ ಮಾಡಿದ್ದರೆ ಅದರ ಮೇಲೆ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ವಿಚಾರ ಮಾಡಿಸುತ್ತೇನೆ, ತಾವು ಈ ಪ್ರಶ್ನೆಯನ್ನು ತಡೆಹಿಡಿಯಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಮಾರಾಟದ ರೇಟನ್ನು ಪ್ರಿಂಟ್ ಮಾಡಿ ಹಂಚಿದ್ದಾರೆ. ನನ್ನ ಕನ್ಸರ್ನ್ ಏನೆಂದರೆ, ಗೊಬ್ಬರ ಕೊಳ್ಳುವುದಕ್ಕೆ ಸಾಲವನ್ನು ಮಂಜೂರು ಮಾಡುತ್ತಾರೆ. ಇದರ ಜೊತೆಗೆ 'ಬಿ' ಕಾಂಪೊನೆಂಟ್ ಮತ್ತು ಮೂರನೆಯ ಒಂದು ಭಾಗ ಗೊಬ್ಬರ ತೆಗೆದುಕೊಳ್ಳಬೇಕು ಅದೂ ಅಲ್ಲದೆ ಮಾರ್ಕೆಟಿಂಗ್ ಫೆಡರೇಷನ್‌ನಲ್ಲಿಯೇ ಕೊಂಡುಕೊಳ್ಳಬೇಕು ಎಂದು ಸರ್ಕ್ಯುಲರ್ ಸಹ ಕಳುಹಿಸಿದ್ದಾರೆ. ಒಂದು ಟನ್‌ಗೆ ೧೦-೨೦ ರೂಪಾಯಿಗಳ ವ್ಯತ್ಯಾಸ ಇದೆ.

ಶ್ರೀ ಕೆ. ಎಚ್. ರಂಗನಾಥ್.—ಇಲ್ಲಿ ದರ ಸ್ವಲ್ಪ ಜಾಸ್ತಿಯಾದರೂ ಸಹ ರೈತರ ಮನೆ ಬಾಗಿಲಿಗೆ ಗೊಬ್ಬರವನ್ನು ಒದಗಿಸಲಾಗುತ್ತದೆ. ಮತ್ತು ತೂಕದಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಆದರೆ ಖಾಸಗಿಯವರಿಂದ ತಾಲ್ಲೂಕ್ ಮಟ್ಟದಲ್ಲಿ ಕಡಿಮೆ ದರದಲ್ಲಿ ಕೊಂಡುಕೊಂಡರೂ ಸಹ ಅದನ್ನು ಸಾಗಿಸಲು ಹಣ ಖರ್ಚು ಮಾಡಬೇಕಾಗುತ್ತದೆ. ನಮ್ಮ ರೈತರು ಇದನ್ನು ವಿಚಾರ ಮಾಡುವುದಿಲ್ಲ. ಇಲ್ಲಿ ಹತ್ತು ರೂಪಾಯಿಗಳಷ್ಟು ಜಾಸ್ತಿ ದರವಿದ್ದರೆ ಅದೇನೂ ಜಾಸ್ತಿಯಾಗುವುದಿಲ್ಲ.

೧-೩೦ ಪಿ.ಎಂ.

ಶ್ರೀ ಕೆ. ಎಚ್. ಹನುಮೇಗೌಡ — ತಾವು ಹೇಳಿದಂತೆ ಮನೆ ಬಾಗಿಲಿಗೆ ಗೊಬ್ಬರವನ್ನು ಒದಗಿಸು ತ್ತಿಲ್ಲ. ಸೊಸೈಟಿಯಿಂದ ತೆಗೆದುಕೊಂಡು ಹೋಗಬೇಕಾಗಿದೆ. ಫ್ಯಾಕ್ಟ್ ಕಂಪನಿಯ ಕಛೇರಿಗಳು ಈಗ ಎಲ್ಲ ಕಡೆಯೂ ಇವೆ ಅಲ್ಲಿ ದರ ಕಡಿಮೆ ಇದೆ. ಆದರೂ ಸಹ ರೈತರಿಗೆ ಬಿ. ಕಾಂಪೊನೆಂಟನ್ನು ಕಡ್ಡಾಯ ವಾಗಿ ಜಾಸ್ತಿ ದರವಿರುವಂತಹ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇಲ್ಲವೇ ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಕೊಂಡುಕೊಳ್ಳಬೇಕೆಂದು ಒತ್ತಾಯ ಮಾಡಲಾಗುತ್ತಿದೆ. ರೈತರ ಹಿತದೃಷ್ಟಿಯಿಂದ ಇದು ಒಳ್ಳೆಯದಲ್ಲ. ಈಗ ೧೫.೫.೭೯ರಿಂದ ೨೦ ರೂ. ಗಳವರೆಗೆ ದರದಲ್ಲಿ ಏನು ವ್ಯತ್ಯಾಸವಿದೆ, ಅದನ್ನು ತೆಗೆದು ಬೇರೆ ಕಂಪನಿಯವರು ಮಾರಾಟ ಮಾಡುವ ದರದಲ್ಲಿಯೇ ಒದಗಿಸುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಇಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು ಮತ್ತು ಮಾರ್ಕೆಟಿಂಗ್ ಫೆಡರೇಷನ್ ಅವರು ವರ್ಷದ ೩೬೫ ದಿವಸವೂ ಸ್ಟಾಕ್ ಇಟ್ಟಿರಬೇಕಾಗುತ್ತದೆ. ಮತ್ತು ಈ ಸಂಸ್ಥೆಗಳು ಬ್ಯಾಂಕ್‌ನಿಂದ ಪಡೆದ ಹಣಕ್ಕೆ ಸಾಲ ಕೊಡಬೇಕಾಗಿದೆ. ಆದರೆ ಖಾಸಗೀ ಕಂಪನಿಯವರು

ಮಾರ್ಜಿನ್ ಬಿಟ್ಟು ವ್ಯಾಪಾರ ಮಾಡಲು ತಯಾರಿದ್ದಾರೆ. ನಾವು ಆ ರೀತಿ ಮಾಡಲು ಸಾಧ್ಯವಿಲ್ಲ. ರೈತರಿಗೆ ಅನುಕೂಲ ಮಾಡಬೇಕೆಂಬುದೇ ಸರ್ಕಾರದ ಮೂಲ ಉದ್ದೇಶವಾಗಿದೆ. ಆದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ತಮ್ಮ ಹತ್ತಿರ ೫ ಕೋಟಿ ರೂ. ಗಳಷ್ಟು ಗೊಬ್ಬರ ಸ್ಟಾಕ್ ಇದೆ. ಈ ಹಣಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಈ ಕಾರಣದಿಂದ ಬೆಲೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಇಲ್ಲಿ ಫ್ಯಾಕ್ಟ್ ಕಂಪನಿಯವರು ಮಾರಾಟ ಮಾಡುವ ಗೊಬ್ಬರದ ಅಂಗಡಿ ಮತ್ತು ಮಾರ್ಕೆಟಿಂಗ್ ಫೆಡರೇಷನ್ ಅವರ ಅಂಗಡಿ ಹಾಗೂ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರ ಅಂಗಡಿ ಒಂದೇ ಜಾಗದಲ್ಲಿವೆ. ಆದರೆ ದರದಲ್ಲಿ ಟನ್ ಒಂದಕ್ಕೆ ೨೦ ರೂ. ನಷ್ಟು ವ್ಯತ್ಯಾಸವಿದೆ. ಅಂದರೆ ಒಂದು ಮೂಟೆಗೆ ಎರಡು ರೂ. ಹೆಚ್ಚಿಗೆ ಕೊಡಬೇಕಾಗಿದೆ. ಈ ಕಾರಣದಿಂದ ರೈತರು ಕಡಿಮೆ ಬೆಲೆ ಇರುವ ಕಡೆಗೆ ಹೋಗುವುದರಲ್ಲಿ ತಪ್ಪೇನಿದೆ ?

ಶ್ರೀ ಕೆ. ಎಚ್. ರಂಗನಾಥ್.—ಇಲ್ಲಿ ನಾವು ೫ ಕೋಟಿ ರೂಪಾಯಿಗಳಿಗೆ ಬಡ್ಡಿ ಲೆಕ್ಕ ಹಾಕುವುದು ಬೇಡವೇ ?

ಶ್ರೀ ಕೆ. ಎಚ್. ಹನುಮೇಗೌಡ.—ಅಂದರೆ ಬಡ್ಡಿ ಹಣವನ್ನು ರೈತರು ಕೊಡಬೇಕೆಂದು ಹೇಳುತ್ತೀರಾ ? ಈಗ ಗೊಬ್ಬರದ ಮೇಲಿನ ಕಂಟ್ರೋಲ್ ತೆಗೆದುಹಾಕಿರುವುದರಿಂದ ರೈತರು ಕಡಿಮೆ ದರ ಇರುವ ಕಡೆ ಕೊಂಡುಕೊಳ್ಳುತ್ತಾರೆ. ಆದರೆ ರೈತರಿಗೆ ದರ ಜಾಸ್ತಿ ಇರುವ ಕಡೆ ಕೊಂಡುಕೊಳ್ಳಬೇಕೆಂದು ಒತ್ತಾಯ ಮಾಡುವುದು ನ್ಯಾಯವೇ ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ಬಹಳ ಉದ್ವೇಗದಿಂದ ಮಾತನಾಡುತ್ತಾರೆ. ಈಗ ನಾವು ಬಿ. ಕಾಂಪೊನೆಂಟ್ ಗೊಬ್ಬರ ಕೊಂಡುಕೊಳ್ಳಲು ಸಾಲದ ವ್ಯವಸ್ಥೆ ಮಾಡಿದ್ದೇವೆ. ಸಾಲವನ್ನು ಹಣದ ರೂಪದಲ್ಲಿ ಕೊಡದೆ ಗೊಬ್ಬರದ ರೂಪದಲ್ಲಿ ಕೊಡಲಾಗುತ್ತಿದೆ. ತಾವು ಹೇಳಿದಂತೆ ಮಾಡಬೇಕಾದರೆ ಸಾಲವನ್ನು ಹಣದ ರೂಪದಲ್ಲಿಯೇ ಕೊಡಬೇಕಾಗುತ್ತದೆ. ಈ ರೀತಿ ಮಾಡಿದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಹಾಗೂ ಮಾರ್ಕೆಟಿಂಗ್ ಫೆಡರೇಷನ್ನನ್ನು ಮುಚ್ಚಬೇಕಾಗುತ್ತದೆ. ಮಾನ್ಯ ಸದಸ್ಯರು ಇದೊಂದನ್ನೇ ನೋಡುವುದು ಸರಿಯಲ್ಲ. ಏಕೆಂದರೆ ನಾವು ಒಳ್ಳೆಯ ಕ್ವಾಲಿಟಿ ಇರತಕ್ಕಂಥ ಜಪ್ಸನ್ ಗೊಬ್ಬರವನ್ನು ರೈತರಿಗೆ ಕೊಡುತ್ತಿದ್ದೇವೆ. ಇಂತಹ ಒಳ್ಳೆಯ ಗೊಬ್ಬರ ಖಾಸಗಿ ಕಂಪನಿಯವರಲ್ಲಿ ಸಿಗುತ್ತದೆಯೇ ? ಇದನ್ನೆಲ್ಲಾ ಮಾನ್ಯ ಸದಸ್ಯರು ನೋಡಬೇಕು. ಸರ್ಕಾರದ ಮಟ್ಟದಲ್ಲಿ ವ್ಯಾಪಾರ ಮಾಡುವುದು ಬೇಡ ಎಂದರೆ ಅದು ಬೇರೆ ಮಾತು. ಆದರೆ ವ್ಯಾಪಾರ ಮಾಡುವಾಗ ಸಾಲ ತಂದ ಹಣಕ್ಕೆ ಬಡ್ಡಿ ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ವಿಚಾರ ಮಾಡಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಇಲ್ಲಿ ಒಂದೊಂದು ಕಡೆ ಒಂದೊಂದು ರೀತಿಯ ದರವಿರುವುದು ಸರಿಯಲ್ಲ. ಒಳ್ಳೆಯ ಸಾಲು ಕಡಿಮೆ ಬೆಲೆಗೆ ಎಲ್ಲಿ ಸಿಗುತ್ತದೋ, ಅಲ್ಲಿ ರೈತರು ಕೊಂಡುಕೊಳ್ಳುವುದರಲ್ಲಿ ತಪ್ಪೇನಿದೆ ? ರೈತರು ಒಂದೊಂದು ಪೈಸೆಯನ್ನು ಲೆಕ್ಕ ಹಾಕುತ್ತಾರೆ. ಆದ ಕಾರಣ ತಾವು ರೈತರ ಹಿತದೃಷ್ಟಿಯಿಂದ ಹಾಗೂ ವ್ಯಾಪಾರದ ಹಿತದೃಷ್ಟಿಯಿಂದ ಈ ರೀತಿ ದರವನ್ನು ಹೆಚ್ಚು ಮಾಡಿರುವುದು ಸರಿಯಲ್ಲ. ಬೇಕಾದರೆ ಸಬ್ಸಿಡಿ ಕೊಟ್ಟಾದರೂ ಸಹ ಖಾಸಗಿ ಕಂಪನಿಯವರು ಯಾವ ದರಕ್ಕೆ ಮಾರಾಟ ಮಾಡುತ್ತಿದ್ದಾರೋ ಅದೇ ದರಕ್ಕೆ ಮಾರಾಟ ಮಾಡಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರ ಉದ್ದೇಶ ಸಾಧುವಾದುದಾಗಿದೆ. ಆದರೆ ಇದನ್ನು ನಾವು ವ್ಯವಹಾರ ದೃಷ್ಟಿಯಿಂದ ನೋಡಬೇಕಾಗುತ್ತದೆ. ದೊಡ್ಡ ದೊಡ್ಡ ಕಂಪನಿಯವರಾದರೆ ರಿಬೇಟ್ಸ್ ಕೊಡುತ್ತಾರೆ ಮತ್ತು ಮಾರ್ಜಿನ್ ಬಿಟ್ಟು ವ್ಯಾಪಾರ ಮಾಡಲು ಅವರು ತಯಾರಿರುತ್ತಾರೆ. ಆದರೆ ಮಾರ್ಕೆಟಿಂಗ್ ಫೆಡರೇಷನ್ ಅವರು ಮತ್ತು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು ಆ ರೀತಿ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಇಲ್ಲಿ ವರ್ಷದ ೩೬೫ ದಿವಸಗಳೂ ಸ್ಟಾಕ್ ಇಡಬೇಕಾಗಿದೆ ಮತ್ತು ಸಾಲದ ಹಣಕ್ಕೆ ಬಡ್ಡಿ ಕೊಡಬೇಕಾಗಿದೆ. ಈ ಕಾರಣದಿಂದ ಬಿ. ಕಾಂಪೊನೆಂಟ್ ಗೊಬ್ಬರವನ್ನು ಸಾಲದ ರೂಪದಲ್ಲಿ ಒದಗಿಸಲಾಗುತ್ತಿದೆ. ಅವರು ಇಷ್ಟಬಂದ ಕಡೆ ಕೊಂಡುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದರೆ, ಸಾಲವನ್ನು ಹಣದ ರೂಪದಲ್ಲಿಯೇ ಎ-ಕಾಂಪೊನೆಂಟ್ ಗೊಬ್ಬರಕ್ಕೆ ಕೊಟ್ಟಂತೆ ಕೊಡಬೇಕಾಗುತ್ತದೆ. ಈ ರೀತಿ ಮಾಡುವುದರಿಂದ ರೈತರು ಗೊಬ್ಬರ

ಖರೀದಿ ಮಾಡುವ ಸಲುವಾಗಿಯೇ ಆ ಹಣವನ್ನು ಖರ್ಚು ಮಾಡುತ್ತಾರೆಂದು ಹೇಳುವುದು ಕಷ್ಟ. ಕೆಲವು ರೈತರು ಗೊಬ್ಬರ ಪನ್ನೇ ಕಡಿಮೆ ಬೆಲೆಗೆ ಮಾರಿಕೊಳ್ಳುವುದೂ ಉಂಟು. ಇದನ್ನೆಲ್ಲಾ ನಾವು ನೋಡ ಬೇಕಾಗುತ್ತದೆ. ವ್ಯವಹಾರ ಮಾಡುವಾಗ ದರ ಸ್ವಲ್ಪ ಜಾಸ್ತಿ ಬೀಳುವುದು ಅನಿವಾರ್ಯವಾಗುತ್ತದೆ. ರೈತರಿಗೆ ತೊಂದರೆ ಮಾಡಬೇಕೆಂದು ಈ ಸಂಸ್ಥೆಗಳು ವ್ಯಾಪಾರ ಮಾಡುತ್ತಿಲ್ಲ ಈ ಸಂಸ್ಥೆಗಳಿಗೆ ಸರ್ಕಾರ ದಿಂದ ಒಂದೂವರೆ ಕೋಟಿಯಷ್ಟು ಹಣವನ್ನು ವ್ಯವಸ್ಥೆ ಮಾಡಿಕೊಡುತ್ತಿದ್ದೇವೆ. ಈ ಕಾರಣದಿಂದ ಈ ಸಂಸ್ಥೆಗಳ ಮೂಲಕವೇ ಗೊಬ್ಬರವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದೇವೆ. ತಾವು ಏನಾ ದರು ಹಣವನ್ನೇ ಸಾಲದ ರೂಪದಲ್ಲಿ ಕೊಡಬೇಕೆಂದರೆ ಈ ಸಂಸ್ಥೆಗಳನ್ನು ಮುಚ್ಚಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಇದು ಒಂದು ಮುಖ್ಯವಾದ ಪ್ರಶ್ನೆ. ತಾವು ದಯಮಾಡಿ ತಿಳಿದು ಕೊಳ್ಳಬೇಕು. ಗೊಬ್ಬರ ಸಿಕ್ಕುವಾಗ ಇಷ್ಟೊಂದು ಕೂಗಾಟ ಆಗಿದೆ. ಗೊಬ್ಬರ ಸಿಕ್ಕದೇ ಇದ್ದಾಗ ಸರ್ಕಾರ ಏನು ಮಾಡುತ್ತಿದೆ, ಏಕೆ ಗೊಬ್ಬರ ತಂದು ಕೊಡಲಿಲ್ಲ, ಎಂದು ಹೀಗೆಲ್ಲಾ ಮಾತನಾಡುತ್ತಿದ್ದರು. ಈಗ ಯಾವುದೋ ಒಂದು ಸಂಸ್ಥೆಯವರು ಒಂದು ಹತ್ತು ರೂಪಾಯಿ ಕಡಿಮೆಗೆ ಕೊಡುತ್ತಿದ್ದಾರೆ. ಆದರಂತೆ ಸರ್ಕಾರದವರು ಏತಕ್ಕೆ ಮಾಡಲಿಲ್ಲ ಎಂದು ಹೇಳಿದರೆ ಒಂದು ಸಂಸ್ಥೆ ಬೇಕಾದಾಗ ತೆಗೆದು ಬೇಡವಾದಾಗ ಆದರ ಬಾಗಿಲನ್ನು ಮುಚ್ಚಬಹುದು. ಆದರೆ ಸರ್ಕಾರ ಆ ರೀತಿ ಮಾಡುವುದಕ್ಕಾಗುವುದಿಲ್ಲ. So, you have to go with this. Because the private people particularly do it with a view to see that the Corporation or Federation incur loss. Thus, the Corporation might be closed. ಗೊಬ್ಬರ ಇಲ್ಲದೇ ಇರುವಾಗ ರೈತರು ನಮಗೆ ಗೊಬ್ಬರ ಕೊಡಿಸಿಕೊಡಿ ಎಂದು ಕೇಳುತ್ತಿದ್ದರು. ಸರ್ಕಾರ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಇದರ ಬೆಲೆ ನಿಗದಿ ಮಾಡಿದೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಮಾನ್ಯ ಮುಖ್ಯ ಮಂತ್ರಿಗಳು ಮತ್ತು ವ್ಯವಸಾಯ ಖಾತೆಯ ಮಂತ್ರಿಗಳು ಈ ವಿಚಾರವನ್ನು ವ್ಯವಹಾರ ದೃಷ್ಟಿಯಿಂದ ನೋಡಬೇಕು. ವ್ಯಾಪಾರ ದೃಷ್ಟಿಯಿಂದ ನೋಡಬಾರದು ಗೊಬ್ಬರವನ್ನು ರೈತರಿಗೆ ಸರಬರಾಜು ಮಾಡತಕ್ಕ ಸಂಬಂಧದಲ್ಲಿ ಖರ್ಚುವೆಚ್ಚ ಏನು ಬರುತ್ತದೆ ಅದೆಲ್ಲವನ್ನೂ ಬಳಕೆದಾರರ ಮೇಲೆ ಹಾಕುತ್ತಾರೆ. ಆದ್ದರಿಂದ ಇದರ ಬೆಲೆ ಜಾಸ್ತಿಯಾಗಿರದೆ ಆದಕ್ಕಾಗಿ ನಾವು ಕೇಳುವುದೇನೆಂದರೆ ಒಬ್ಬ ಬಡಸಗ ಮನುಷ್ಯ ಯಾವ ಬೆಲೆಯಲ್ಲಿ ಖರೀದಿ ಮಾಡುತಾನೆ. ಯೋ ಅದೇ ಬೆಲೆಯಲ್ಲಿ ಸರ್ಕಾರದವರು ಖರೀದಿ ಮಾಡಬೇಕೆಂದು ಕೇಳುತ್ತೇವೆ. ಸರ್ಕಾರದವದ ಗೊಬ್ಬರಕ್ಕೆ ಸಂಬಂಧಪಟ್ಟ ವಿಷಯದಲ್ಲಿ ವಿಮಾನದ ದರ, ಮತ್ತು ತಮ್ಮ ಸ್ವಂತಕ್ಕೆ ಖರ್ಚು ಮಾಡಿದ ಹಣ ಎಲ್ಲವನ್ನೂ ಈ ಗೊಬ್ಬರದ ಮೇಲೆ ಹಾಕಿ ಬೆಲೆ ಜಾಸ್ತಿಯಾಗಿದೆ, ಒಂದು ಮೇಳೆ ಬೆಲೆ ಜಾಸ್ತಿಯಾಗಿದ್ದರೆ ಸರ್ಕಾರ ಸಬ್ಸಿಡಿ ಕೊಟ್ಟು ರೈತರಿಗೆ ಗೊಬ್ಬರವನ್ನು ಸರಬರಾಜು ಮಾಡಬೇಕು. ಈ ದೃಷ್ಟಿಯಿಂದರೆ ಇದನ್ನು ವ್ಯಾಪಾರ ದೃಷ್ಟಿಯಿಂದ ನೋಡದೆ; ವ್ಯವಹಾರ ದೃಷ್ಟಿಯಿಂದ ನೋಡುವುದು ಸರಿಯಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಶುಗರ್ ಫ್ಯಾಕ್ಟರಿಯ ಚೇರ್ಮನ್ ಆಗಿದ್ದಾರೆ. ಅವರು ಓಡಾಟದ ಖರ್ಚನ್ನು ಯಾರಿಗೆ ಹಾಕುತ್ತಾರೊ ಗೊತ್ತಿಲ್ಲ. ಬಹುಶಃ ಅವರ ಮನೆಯ ಖರ್ಚಿಗೆ ಹಾಕುತ್ತಾರೆಯೇ ? ಈ ದೃಷ್ಟಿಯಿಂದ ವ್ಯವಹಾರ ಮಾಡುವಾಗ ವ್ಯವಹಾರಿಕ ದೃಷ್ಟಿಯಿಂದ ಮಾತನಾಡಬೇಕು. ಈಗ ಗೊಬ್ಬರಕ್ಕೆ ಮ್ಯಾಕ್ಸಿಮಮ್ ರೇಟನ್ನು ಫಿಕ್ಸ್ ಮಾಡಿದ್ದೇವೆ. ಕೆಲವು ರಿಯಾಯಿತಿಯನ್ನು ಕಂಪನಿಯವರು ಕೊಡುತ್ತಾರೆ. ಆ ರಿಯಾಯಿತಿಯನ್ನು ರೈತರಿಗೆ ನಾವು ಕೊಡಬೇಕಾಗುತ್ತದೆ. ಈ ಗೊಬ್ಬರವನ್ನು ಕೊಂಡುಕೊಳ್ಳುವುದಕ್ಕೆ ಏನು ಬಂಡವಾಳ ಹಾಕಿಕೊಂಡಿದ್ದೇವೆ. ಆ ಹಣ ಮತ್ತು ಇತರ ವಿತರಣೆಗೆ ಸಂಬಂಧಪಟ್ಟಹಾಗೆ ಆಗತಕ್ಕಂತಹ ಖರ್ಚು ಇದನ್ನು ನಾವು ಬಳಕೆ ದಾರರ ಮೇಲೆ ಹಾಕಬೇಕಾಗುತ್ತದೆ. ಇದನ್ನು ಯಾವಪ್ರಮಾಣದಲ್ಲಿ ಹಾಕಬೇಕೆಂಬುದನ್ನು ಯೋಚನೆ ಮಾಡಿ ಅತಿ ಕಡಿಮೆ ಧಾರಣೆಯಲ್ಲಿ ಇದನ್ನು ನಿಗದಿ ಮಾಡಲಾಗುತ್ತದೆ. ಆದರೆ ಶ್ರೀಮಾನ್ ಭೀಮಣ್ಣ ಖಂಡ್ರೆಯ ವರು ಹೇಳಿದ ರೀತಿಯಲ್ಲಿ ವ್ಯಾಪಾರದ ದೃಷ್ಟಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.